# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 723 |
| 02. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ. ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) |
| 03. | ಉತ್ತರಿಸುವ ದಿನಾಂಕ | : 12-03-2020 |
| 04. | ಉತ್ತರಿಸುವ ಸಚಿವರು | : ಮಾನ್ಯ ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಪತ್ತೆಯಾದ ಮಾದಕ ವಸ್ತು ಪ್ರಕರಣಗಳು ಎಷ್ಟು; (ವರ್ಷವಾರು, ಪೊಲೀಸ್ ಠಾಣಾವಾರು ಮಾಹಿತಿ ಒದಗಿಸುವುದು) | ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಛೇರಿಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎನ್‌ಡಿಪಿಎಸ್ ಕಾಯ್ದೆ 1985 (Narcotic Drugs and Psychotropic Substances Act 1985) ರಡಿಯಲ್ಲಿ ವರದಿಯಾದ ಪ್ರಕರಣಗಳ ಠಾಣಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ | ವಶಪಡಿಸಿಕೊಳ್ಳಲಾದ ಮಾದಕ ವಸ್ತುಗಳು ಯಾವುವು; (ಪ್ರಮಾಣ, ವರ್ಷವಾರು ಮಾಹಿತಿ ಒದಗಿಸುವುದು) | ವಶಪಡಿಸಿಕೊಳ್ಳಲಾದ ಮಾದಕ ವಸ್ತುಗಳ ಪ್ರಮಾಣದ ವರ್ಷವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ | ಮಾದಕ ವಸ್ತುಗಳನ್ನು ಸರಬರಾಜು ಮಾಡಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಧಕ್ಕೆ ತರುತ್ತಿರುವ ವ್ಯಕ್ತಿಗಳ ವಿರುದ್ಧ ಇದುವರೆವಿಗೆ ಕೈಗೊಂಡ ಕ್ರಮಗಳು ಏನು; (ಸಂಪೂರ್ಣ ಮಾಹಿತಿ ಒದಗಿಸುವುದು) | ಮಾದಕ ವಸ್ತುಗಳ ಪ್ರಕರಣದಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತವೆ. |
| ಈ | ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮದ ಕುರಿತಾಗಿ ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಅರಿವು ಮೂಡಿಸುವಲ್ಲಿ ಸರ್ಕಾರ ಮತ್ತು ವಿವಿಧ ಇಲಾಖೆಗಳು ಕೈಗೊಂಡಿರುವ ಕ್ರಮಗಳೇನು ಮತ್ತು ಫಲಶೃತಿ ಏನು? (ಸಂಪೂರ್ಣ ಮಾಹಿತಿ ಒದಗಿಸುವುದು) | ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮದ ಕುರಿತಾಗಿ ವಿದ್ಯಾರ್ಥಿಗಳು ಹಾಗೂ ಯುವ ಜನತೆಗೆ ಅರಿವು ಮೂಡಿಸಲು ಇಲಾಖೆಯ ವತಿಯಿಂದ ತೆಗೆದುಕೊಂಡಿರುವ ಕ್ರಮಗಳ ಮಾಹಿತಿಯನ್ನು **ಅನುಬಂಧ-3**ರಲ್ಲಿ ಒದಗಿಸಿದೆ. |

ಸಂಖ್ಯೆ: ಒಇ 03 ಪಿಎಸ್‌ಡಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

## <u>ಅನುಬಂಧ-1:</u>

## <u>ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎನ್‌ಡಿಪಿಎಸ್ ಕಾಯ್ದೆ 1985 ರಡಿಯಲ್ಲಿ ದಾಖಲಾದ ಪ್ರಕರಣಗಳ ಠಾಣಾವಾರು ವಿವರ:</u>

| Sl.No | PS Name | 2017 | 2018 | 2019 | 2020 |
|---|---|---|---|---|---|
| 1. | Adugodi PS | 5 | 8 | 10 | 6 |
| 2. | Airport PS | 0 | 0 | 0 | 0 |
| 3. | Amruthahally PS | 2 | 0 | 0 | 0 |
| 4. | Annapoorneshwari Nagar PS | 1 | 0 | 0 | 0 |
| 5. | Ashoknagar PS | 6 | 10 | 6 | 0 |
| 6. | Bagalagunte PS | 1 | 5 | 3 | 0 |
| 7. | Bagalur PS | 2 | 2 | 2 | 0 |
| 8. | Banashankari PS | 7 | 2 | 10 | 0 |
| 9. | Banasawadi PS | 8 | 7 | 12 | 3 |
| 10. | Bandepalya PS | 4 | 1 | 21 | 1 |
| 11. | Basavanagudi PS | 9 | 2 | 2 | 0 |
| 12. | Basaveshwara Nagar PS | 0 | 2 | 1 | 0 |
| 13. | Baguru PS | 6 | 3 | 6 | 1 |
| 14. | Bellanduru PS | 5 | 4 | 4 | 1 |
| 15. | Bharathi Nagar PS | 1 | 2 | 18 | 4 |
| 16. | BIAL PS | 1 | 1 | 1 | 0 |
| 17. | Bommanahalli PS | 7 | 3 | 9 | 0 |
| 18. | Byadrahalli PS | 3 | 0 | 0 | 0 |
| 19. | Byappanahalli PS | 3 | 0 | 12 | 0 |
| 20. | Byatarayanapura PS | 2 | 2 | 1 | 0 |
| 21. | Chamrajpet PS | 2 | 2 | 1 | 0 |
| 22. | Chandra Layout PS | 0 | 2 | 0 | 1 |
| 23. | Channammanakere Achu kattu PS | 0 | 2 | 6 | 1 |
| 24. | Chikkajala PS | 2 | 2 | 1 | 0 |
| 25. | City Market PS | 1 | 1 | 1 | 0 |
| 26. | Commercial Street PS | 1 | 2 | 10 | 4 |
| 27. | Cottonpet PS | 2 | 2 | 3 | 0 |
| 28. | Cubbon Park PS | 2 | 3 | 1 | 0 |
| 29. | Devanahalli PS | 2 | 2 | 2 | 0 |
| 30. | Devarajeevanahalli PS | 1 | 6 | 35 | 11 |
| 31. | Electronic City PS | 11 | 2 | 5 | 3 |
| 32. | Girinagar PS | 2 | 0 | 3 | 0 |

..2

| Sl.no | PS Name | 2017 | 2018 | 2019 | 2020 |
|---|---|---|---|---|---|
| 33. | H.A.L. PS | 7 | 4 | 11 | 1 |
| 34. | Halasur PS | 2 | 2 | 30 | 1 |
| 35. | Halasurgate PS | 4 | 0 | 1 | 0 |
| 36. | Hanumanthanagar PS | 1 | 0 | 2 | 0 |
| 37. | Hebbal PS | 2 | 1 | 4 | 0 |
| 38. | Hennur PS | 9 | 9 | 41 | 2 |
| 39. | High Grounds PS | 0 | 1 | 1 | 1 |
| 40. | HSR Layout Ps | 8 | 6 | 8 | 1 |
| 41. | Hulimavu PS | 5 | 3 | 6 | 2 |
| 42. | Indiranagar PS | 3 | 5 | 12 | 5 |
| 43. | J.C. Nagar PS | 0 | 2 | 2 | 0 |
| 44. | Jagajeevanram Nagar PS | 2 | 2 | 0 | 0 |
| 45. | Jalahalli PS | 1 | 0 | 3 | 0 |
| 46. | Jayanagar PS | 5 | 1 | 5 | 0 |
| 47. | Jayaprakash Nagar Ps | 1 | 1 | 1 | 0 |
| 48. | Jeevan Bheemanagr PS | 1 | 0 | 48 | 3 |
| 49. | Jnanabharathi PS | 3 | 3 | 1 | 0 |
| 50. | K.R. Puram PS | 21 | 8 | 25 | 4 |
| 51. | Kadugodi PS | 3 | 3 | 4 | 8 |
| 52. | Kadugondana Halli PS | 6 | 2 | 47 | 3 |
| 53. | Kalsipalya PS | 2 | 3 | 3 | 0 |
| 54. | Kamakshipalya PS | 1 | 3 | 1 | 0 |
| 55. | Kempapura Agrahara PS | 2 | 4 | 5 | 1 |
| 56. | Kempegowda Nagar PS | 0 | 2 | 2 | 0 |
| 57. | Kengeri PS | 3 | 3 | 1 | 1 |
| 58. | Kodigehalli PS | 2 | 0 | 3 | 0 |
| 59. | Konanakunte PS | 1 | 4 | 7 | 1 |
| 60. | Koramangala PS | 8 | 8 | 21 | 4 |
| 61. | Kothanur PS | 14 | 6 | 4 | 0 |
| 62. | Kumaraswamy Layout PS | 3 | 1 | 7 | 1 |
| 63. | Madivala PS | 6 | 3 | 17 | 3 |
| 64. | Magadi Road PS | 0 | 0 | 1 | 0 |
| 65. | Mahadevapura PS | 4 | 5 | 13 | 1 |

..3

| Sl.no | PS Name | 2017 | 2018 | 2019 | 2020 |
|---|---|---|---|---|---|
| 66. | Mahalakshipuram PS | 1 | 2 | 3 | 0 |
| 67. | Malleshwaram PS | 0 | 1 | 3 | 0 |
| 68. | Marathahalli PS | 4 | 5 | 5 | 2 |
| 69. | Mico Layout PS | 7 | 6 | 7 | 0 |
| 70. | Nandini Layout PS | 1 | 2 | 7 | 0 |
| 71. | Parappana Agrahara | 22 | 7 | 8 | 0 |
| 72. | Peenya PS | 2 | 0 | 4 | 1 |
| 73. | Pulakeshinagar PS | 6 | 3 | 25 | 1 |
| 74. | Puttenahalli PS | 0 | 2 | 4 | 0 |
| 75. | R.M.C Yard PS | 5 | 8 | 7 | 1 |
| 76. | R.T Nagar | 4 | 10 | 5 | 0 |
| 77. | Rajagopal Nagar PS | 4 | 1 | 4 | 0 |
| 78. | Rajajinagar PS | 1 | 0 | 5 | 2 |
| 79. | Rajarajeshwari Nagar PS | 3 | 0 | 4 | 0 |
| 80. | Ramamurthy Nagar PS | 10 | 5 | 18 | 2 |
| 81. | S.J. Park PS | 0 | 1 | 2 | 0 |
| 82. | Sadashivanagar PS | 0 | 2 | 1 | 0 |
| 83. | Sampangiramanagar PS | 1 | 0 | 2 | 1 |
| 84. | Sampigehalli PS | 0 | 4 | 0 | 1 |
| 85. | Sanjaynagar PS | 1 | 2 | 4 | 0 |
| 86. | Seshadripuram PS | 0 | 1 | 0 | 0 |
| 87. | Shivajinagar PS | 1 | 1 | 15 | 0 |
| 88. | Siddapura PS | 1 | 1 | 3 | 1 |
| 89. | Soladevanahalli PS | 8 | 4 | 5 | 0 |
| 90. | Srirampura PS | 2 | 3 | 7 | 0 |
| 91. | Subramanyanagar PS | 0 | 0 | 2 | 1 |
| 92. | Subramanyapura PS | 2 | 1 | 3 | 0 |
| 93. | Suddagunte Palya PS | 6 | 13 | 49 | 33 |
| 94. | Thalaghattapura PS | 1 | 4 | 4 | 0 |
| 95. | Thilaknagar PS | 8 | 3 | 6 | 1 |
| 96. | Upparpet PS | 1 | 3 | 0 | 0 |
| 97. | Varthur PS | 3 | 2 | 6 | 1 |
| 98. | Vidyaranyapura PS | 1 | 2 | 2 | 0 |
| 99. | Vijayanagar PS | 0 | 1 | 1 | 0 |
| 100. | Vishwesharapuram PS | 2 | 1 | 0 | 0 |

..4

| Sl.no | PS Name | 2017 | 2018 | 2019 | 2020 |
|---|---|---|---|---|---|
| **101.** | Viveknagar PS | 3 | 1 | 4 | 0 |
| **102.** | Vyalikaval PS | 0 | 0 | 1 | 0 |
| **103.** | Whitefield PS | 5 | 3 | 5 | 0 |
| **104.** | Wilsongarden PS | 0 | 0 | 1 | 0 |
| **105.** | Yelahanka New Town PS | 1 | 1 | 3 | 1 |
| **106.** | Yelahanka PS | 3 | 3 | 3 | 0 |
| **107.** | Yeshwanthapura PS | 6 | 2 | 2 | 4 |
| **Total** | | **355** | **286** | **767** | **130** |

## ANNEXURE-2

### STATEMENT SHOWING THE TYPES OF DRUGS SEIZED FOR THE YEARS 2017 TO 2020 (29-02-20)

| SL NO | NAME OF THE DRUGS | 2017 | | | | 2018 | | | | 2019 | | | | 2020 | | | |
|---|---|---|---|---|---|---|---|---|---|---|---|---|---|---|---|---|---|
| | | NO. OF CASES | QTY. OF DRUGS SEIZED (in KGs) | No. Of Persons Arrested | | NO. OF CASES | QTY. OF DRUGS SEIZED (in KGs) | No. Of Persons Arrested | | NO. OF CASES | QTY. OF DRUGS SEIZED (in KGs) | No. Of Persons Arrested | | NO. OF CASES | QTY. OF DRUGS SEIZED (in KGs) | No. Of Persons Arrested | |
| | | | | Indians | Foreigners | | | Indians | Foreigners | | | Indians | Foreigners | | | Indians | Foreigners |
| 1 | GANJA | 290 | 554.611 | 493 | 23 | 245 | 759.838 | 421 | 13 | 728 | 1047.415 | 1193 | 7 | 123 | 125.763 | 226 | 0 |
| 2 | BROWN SUGAR | 4 | 0.532 | 9 | 1 | 2 | 0.766 | 4 | 0 | 1 | 0.038 | 0 | 2 | 1 | 0.027 | 2 | 0 |
| 3 | OPIUM | 3 | 0.332 | 3 | 0 | 3 | 1.249 | 3 | 0 | 5 | 3.683 | 6 | 0 | 0 | 0 | 0 | 0 |
| 4 | HEROIN | 3 | 0.228 | 6 | 0 | 6 | 0.299 | 11 | 0 | 3 | 0.097 | 9 | 0 | 0 | 0 | 0 | 0 |
| 5 | HASHISH | 1 | 6.561 | 2 | 0 | 2 | 0.330 | 3 | 1 | 0 | 1.125 | 0 | 0 | 1 | 4.5 | 3 | 0 |
| 6 | CHARAS | 4 | 4.254 | 9 | 1 | 2 | 0.374 | 2 | 0 | 1 | 0.063 | 2 | 0 | 0 | 0.25 | 0 | 0 |
| 7 | COCAINE | 38 | 1.446 | 9 | 60 | 16 | 2.062 | 2 | 22 | 17 | 0.332 | 1 | 16 | 1 | 0.052 | | 1 |
| 8 | Ephidrin | 1 | 1.000 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 9 | MDMA, MDS Powder & Capsules | 10 | 0.233 | 1 | 13 | 8 | 0.441 | 6 | 8 | 9 | 0.435 | 6 | 6 | 3 | 0.064 | 4 | 1 |

| SL NO | NAME OF THE DRUGS | 2017 | | | | 2018 | | | | 2019 | | | | 2020 | | | |
|---|---|---|---|---|---|---|---|---|---|---|---|---|---|---|---|---|---|
| | | NO. OF CASES | QTY. OF DRUGS SEIZED (in KGs) | No. Of Persons Arrested | | NO. OF CASES | QTY. OF DRUGS SEIZED (in KGs) | No. Of Persons Arrested | | NO. OF CASES | QTY. OF DRUGS SEIZED (in KGs) | No. Of Persons Arrested | | NO. OF CASES | QTY. OF DRUGS SEIZED (in KGs) | No. Of Persons Arrested | |
| | | | | Indians | Foreigners | | | Indians | Foreigners | | | Indians | Foreigners | | | Indians | Foreigners |
| 11 | Ketamin | 0 | 0.008 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 12 | Ampetamine | 2 | 0.311 | 1 | 5 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 14 | Yaba, Restyl,Anxit & Nitrosun Tablets | 1 | 138 Tablets | 3 | 0 | 2 | 2579 Tablets | 2 | 0 | 4 | 1539 Tablets | 12 | 0 | 1 | 500 Tablets | 0 | 1 |
| 15 | LSD Paper | 0 | 297 Papers | 0 | 0 | 0 | 291 Papers | 0 | 0 | 0 | 155 Papers | | 0 | 0 | 0 | 0 | 0 |
| | **TOTAL** | **357** | **569.516** | **538** | **103** | **286** | **765.359** | **454** | **44** | **768** | **1053.188** | **1229** | **31** | **130** | **130.656** | **235** | **3** |

## ಅನುಬಂಧ-3:

**ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮದ ಕುರಿತಾಗಿ ವಿದ್ಯಾರ್ಥಿಗಳು ಹಾಗೂ ಯುವ ಜನತೆಗೆ ಅರಿವು ಮೂಡಿಸಲು ಇಲಾಖೆಯ ವತಿಯಿಂದ ತೆಗೆದುಕೊಂಡಿರುವ ಕ್ರಮಗಳು.**

1. ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ & ಮಾರಾಟ ತಡೆಗಟ್ಟಲು ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಾದಕ ವಸ್ತುಗಳ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ರಹಸ್ಯ ಮಾಹಿತಿಯನ್ನು 1908 (ಟೋಲ್ ಫ್ರೀ) ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಲಾಗಿರುತ್ತದೆ.

2. ಶಾಲಾ ಕಾಲೇಜುಗಳು, ವಿದೇಶಿಯರು ವಾಸಿಸುತ್ತಿರುವ ಪ್ರದೇಶಗಳು ಮತ್ತು ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಾದಕ ದ್ರವ್ಯದ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಶಾಲಾ-ಕಾಲೇಜುಗಳಲ್ಲಿ ಡ್ರಗ್ ಅವೇರ್‌ನೆಸ್ ಪ್ರೋಗ್ರಾಮ್ ಅನ್ನು ನಡೆಸಿ, ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಠಾಣಾ ಸರಹದ್ದಿನ ಬೀಟ್ ಮತ್ತು ಸಬ್-ಬೀಟ್‌ಗಳಲ್ಲಿ ಆಗ್ಗಿಂದಾಗ್ಗೆ ಸಭೆಯನ್ನು ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

3. ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಉಪನ್ಯಾಸದ ಮೂಲಕ ವಿವರವಾಗಿ ತಿಳುವಳಿಕೆ ನೀಡಲಾಗುತ್ತಿದೆ.

4. ಶಾಲಾ ಕಾಲೇಜುಗಳ ಹತ್ತಿರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಮತ್ತು ತಂಬಾಕು ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಹಾಗೂ ಅಲ್ಲಿಯೇ ಸಾರ್ವಜನಿಕವಾಗಿ ಸಿಗರೇಟ್ ಸೇವನೆ ಮಾಡುವವರ ವಿರುದ್ಧ ದಂಡವನ್ನು ವಿಧಿಸುವುದರ ಮೂಲಕ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದನ್ನು ತಡೆಗಟ್ಟುವುದು ಮತ್ತು ಜಾಗೃತಿ ಮೂಡಿಸುವುದರ ಬಗ್ಗೆ ಹೆಚ್ಚಿನ ಗಮನ ಹರಿಸಲು ಸೂಚಿಸಲಾಗಿದೆ.

5. ವಿದೇಶಿಯರು ವಿಶೇಷವಾಗಿ ನೈಜೀರಿಯನ್ಸ್ ಪ್ರಜೆಗಳು ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳ ಸರಬರಾಜಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದ್ದು, ಇಂತಹ ಕೃತ್ಯಗಳಲ್ಲಿ ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿಯರು ವಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಒದಗಿಸುವಂತೆ ಈಗಾಗಲೇ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ವಿಶೇಷ ಕಾರ್ಯಚರಣೆಗಳನ್ನು ನಡೆಸಿ ಇಂತಹ ಕೃತ್ಯವೆಸಗುವಂತಹವರ ವಿರುದ್ಧ ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.

6. ಈ ಸಂಬಂಧ ಸಾಮಾಜಿಕ ಜಾಲತಾಣಗಳ ಮೂಲಕ ಈಗಾಗಲೇ ಸದರಿ ಮಾಹಿತಿಯನ್ನು ಪ್ರಚಾರ ಮಾಡಲಾಗಿರುತ್ತದೆ. ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ಮುದ್ರಣ ಮಾಡಿಸಿ ಎಲ್ಲಾ ವಿಭಾಗೀಯ ಉಪ ಪೊಲೀಸ್ ಆಯುಕ್ತರುಗಳಿಗೆ, ಈ ಸಂಬಂಧ ಎಲ್ಲಾ ವಿದ್ಯಾಸಂಸ್ಥೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತರಿಸಿ ಅರಿವು ಮೂಡಿಸುವ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

..2

7. ಪೊಲೀಸ್ ಇಲಾಖೆಯಲ್ಲದೆ ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳಿಗೂ ಸಹ ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ನೀಡಿ ಈ ಸಂಬಂಧ ಅರಿವು ಮೂಡಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಹೀಗೆ ಮುದ್ರಿಸಲಾಗಿರುವ ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ಪತ್ರಿಕಾ ಗೋಷ್ಠಿ ನಡೆಸಿ ಬಿಡುಗಡೆ ಮಾಡಲಾಗಿದೆ ಹಾಗೂ ದಿನ ಪತ್ರಿಕೆಗಳಲ್ಲಿ ಹಾಗೂ ದೃಶ್ಯ ಮಾಧ್ಯಮಗಳ ಮೂಲಕ ಜಾಹಿರಾತು ನೀಡಲಾಗಿದೆ.

8. ಮಾದಕ ವಸ್ತುಗಳ ಮಾರಾಟಜಾಲವನ್ನು ನಿಯಂತ್ರಿಸಲು ಬೆಂಗಳೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕದ್ರವ್ಯ ವಹಿವಾಟನ್ನು ತಡೆಗಟ್ಟಲು ನಗರದ ಎಲ್ಲಾ ಪೊಲೀಸ್ ಠಾಣೆಗಳಿಗೆ ಸುತ್ತೋಲೆಗಳನ್ನು ಕಳುಹಿಸಲಾಗಿದೆ.

9. ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟತಡೆಗಟ್ಟುವ ಸಲುವಾಗಿ, ಠಾಣಾ ಮಟ್ಟದಲ್ಲಿ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಮಾದಕದ್ರವ್ಯ (ಡ್ರಗ್ಸ್) ಹಾವಳಿಯನ್ನು ತಡೆಗಟ್ಟಲು ಸೂಕ್ತ ನಿಗಾವಹಿಸಿ ಮಾದಕ ದ್ರವ್ಯಗಳ ಮಾರಾಟ ಮತ್ತೆ ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿರುತ್ತದೆ. ಈ ಬಗ್ಗೆ ಬಾತ್ಮಿದಾರರಿಗೂ ಸಹ ಮಾಹಿತಿಯನ್ನು ನೀಡುವಂತೆ ಸೂಚಿಸಿರುತ್ತದೆ. ಅಧಿಕಾರಿ ಸಿಬ್ಬಂದಿಗಳಿಗೆ ಮಾದಕದ್ರವ್ಯ (ಡ್ರಗ್ಸ್)ಗಳ ಮಾರಾಟ ಮತ್ತು ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸುವಂತೆ, ತಲೆಮರೆಸಿಕೊಂಡಿರುವ ಆರೋಪಿಗಳನ್ನು ಪತ್ತೆಹಚ್ಚಲು ಸೂಕ್ತ ತಿಳುವಳಿಕೆ ನೀಡಲಾಗಿದೆ.

10. ಎನ್.ಡಿ.ಪಿ.ಎಸ್ ಕಾಯ್ದೆ ಅಡಿಯಲ್ಲಿ ದಾಖಲಾದ ಎಲ್ಲಾ ಆರೋಪಿಗಳಿಗೆ ಎಂ.ಓ.ಬಿ.ಯನ್ನು ತೆರೆಯಲಾಗುತ್ತಿದ್ದು ಮತ್ತು ಆರೋಪಿತನ ಪೂರ್ಣ ಮಾಹಿತಿಯನ್ನೊಳಗೊಂಡ ತನಿಖಾ ವರದಿಯನ್ನು ಸಂಗ್ರಹಿಸಿಡಲಾಗುತ್ತಿದೆ.

11. ಮಾದಕ ವಸ್ತುಗಳ ಮಾರಾಟಜಾಲವನ್ನು ಪತ್ತೆಹಚ್ಚಿ ಅವರ ಮೊಬೈಲ್ ಸಿ.ಡಿ.ಆರ್. ಅನ್ನು ವಿಶ್ಲೇಷಿಸಿ ಮಾದಕ ವಸ್ತುಗಳ ಮಾರಾಟದ ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಮ ಜರುಗಿಸಲಾಗುತ್ತಿದೆ.

12. ಬಾರ್ ಮತ್ತು ರೆಸ್ಟೋರೆಂಟ್, ಕಾಫಿ-ಡೇ, ಪಬ್, ಡಾನ್ಸ್‌ಬಾರ್ ಮುಂತಾದ ಯುವಕರು ಹೆಚ್ಚಾಗಿ ಸೇರುವ ಸ್ಥಳಗಳು, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಹಾಗು ಇನ್ನಿತರೆ ಪ್ರದೇಶಗಳಲ್ಲಿ ಮಾದಕದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕ್ರಮ ಜರುಗಿಸಲಾಗುತ್ತಿದೆ.

13. ಮಾದಕ ವಸ್ತುಗಳ ವ್ಯಸನಿಗಳನ್ನು ಗುರುತಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಖಾಂತರ ಡಿ-ಅಡಿಕ್ಷನ್ ಸೆಂಟರ್‌ಗಳಿಗೆ ಸೇರಿಸಲು ಕ್ರಮವಹಿಸಲಾಗುತ್ತಿದೆ.

14. ಠಾಣಾ ಸರಹದ್ದುಗಳಲ್ಲಿ ಹೊಯ್ಸಳ, ಚೀತಾ, ಅಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತಿನಲ್ಲಿರುವ ಸಮಯದಲ್ಲಿ ಶಾಲಾ, ಕಾಲೇಜುಗಳ ಬಳಿ ಸೂಕ್ಷ್ಮವಾಗಿ ಗಮನಿಸಿ ಅಪರಿಚಿತ ವ್ಯಕ್ತಿಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಲಾಗಿದೆ. ಮಾದಕದ್ರವ್ಯ ಪದಾರ್ಥಗಳ ವಹಿವಾಟನ್ನು ತಡೆಗಟ್ಟಲು ಹಾಗು ಪತ್ತೆಮಾಡಲು ಹಾಗೂ ಹದಿಹರೆಯದ ಯುವಕ ಮತ್ತು ಯುವತಿಯರನ್ನು ಇಂತಹ ದುಶ್ಚಟಗಳಿಂದ ತಡೆಗಟ್ಟುವ ಸಲುವಾಗಿ ಎಲ್ಲಾ ರೀತಿಯ ಸಾಧ್ಯವಿರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.